# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 11.11.2011**

ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಹೊಟೆಲ್‌ಗಳು, ಛತ್ರಗಳು, ಅಂಗಡಿಮುಂಗಟ್ಟುಗಳು ಹಾಗೂ ಇತರ ಸಗಟು ತ್ಯಾಜ್ಯ ಉತ್ಪಾದಕರು ತಮ್ಮ ಬೇರ್ಪಡಿಸದ ತ್ಯಾಜ್ಯವನ್ನು ಪಾಲಿಕೆಯ ತ್ಯಾಜ್ಯ ಸಂಗ್ರಹಣಾ ವಾಹನಗಳಿಗೆ ನೀಡುತ್ತಿದ್ದಾರೆ. ಇಂತಹ ರೂಢಿ, ಭೂಭರ್ತಿ ನಿವೇಶನಗಳ ಮೇಲಿನ ಒತ್ತಡ ಹೆಚ್ಚಿಸುವುದರ ಜೊತೆಗೆ, ಸಮೀಪದ ಹಳ್ಳಿಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಮತ್ತು ಪಾಲಿಕೆಗೆ ಆರ್ಥಿಕ ಹೊರೆಯೂ ಹೆಚ್ಚಾಗಿಸಿದೆ.

ಆರ್ಥಿಕ ವೆಚ್ಚವನ್ನು ಕಡಿಮೆ ಮಾಡಲು ಪಾಲಿಕೆಯು ಒಣಗಿದ ತ್ಯಾಜ್ಯವನ್ನು ಮರುಬಳಕೆಗೆ ತರಲು ಯೋಜಿಸಿದೆ. ಹೊಟೆಲ್‌ಗಳು, ಛತ್ರಗಳು, ಅಂಗಡಿಮುಂಗಟ್ಟುಗಳು ಹಾಗೂ ಇತರ ಸಗಟು ತ್ಯಾಜ್ಯ ಉತ್ಪಾದಕರು ತಮ್ಮ ತ್ಯಾಜ್ಯಗಳನ್ನು ತಮ್ಮ ಸ್ಥಳದಲ್ಲಿಯೇ ಬೇರ್ಪಡಿಸಿದರೆ ಮಾತ್ರ ಇದು ಸಾಧ್ಯ.

ಮೇಲಿನ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು, ಮೇಲೆ ತಿಳಿಸಿದ ತ್ಯಾಜ್ಯ ಉತ್ಪಾದಕರು ತಮ್ಮ ತ್ಯಾಜ್ಯಗಳನ್ನು ಒಣಗಿದ ಹಾಗೂ ತೇವದಿಂದ ಕೂಡಿದ ತ್ಯಾಜ್ಯಗಳನ್ನಾಗಿ ಬೇರ್ಪಡಿಸಬೇಕು ಮತ್ತು ನಂತರ ಪಾಲಿಕೆಯ ತ್ಯಾಜ್ಯ ಸಂಗ್ರಹಣೆ ವಾಹನಗಳಿಗೆ ಪ್ರತ್ಯೇಕವಾಗಿ ನೀಡಬೇಕು. ಮತ್ತು ಭೂಭರ್ತಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ಸಹಕರಿಸಬೇಕು.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆದೇಶದ ಮೂಲಕ ತನ್ನ ವ್ಯಾಪ್ತಿಯೊಳಗೆ ಬರುವ ಎಲ್ಲಾ ಹೊಟೆಲ್‌ಗಳು, ಛತ್ರಗಳು, ಅಂಗಡಿಮುಂಗಟ್ಟುಗಳು ಹಾಗೂ ಇತರ ಸಗಟು ತ್ಯಾಜ್ಯ ಉತ್ಪಾದಕರು ತಮ್ಮ ತ್ಯಾಜ್ಯಗಳನ್ನು ಒಣಗಿದ ಹಾಗೂ ತೇವದಿಂದ ಕೂಡಿದ ತ್ಯಾಜ್ಯಗಳನ್ನಾಗಿ ಬೇರ್ಪಡಿಸಬೇಕು ಮತ್ತು ನಂತರ ಪಾಲಿಕೆಯ ತ್ಯಾಜ್ಯ ಸಂಗ್ರಹಣೆ ವಾಹನಗಳಿಗೆ ಪ್ರತ್ಯೇಕವಾಗಿ ನೀಡಬೇಕು.

ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವುದರ ಜೊತೆಗೆ, ವ್ಯಾಪಾರ ಪರವಾನಗಿ ರದ್ದು ಮಾಡಲಾಗುವುದು ಹಾಗೂ ನೀರಿನ ಸರಬರಾಜು ನಿಲ್ಲಿಸುವುದು ಮುಂತಾದ ಕಠಿಣ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ, ಬೆಂಗಳೂರು ನಗರದ ನಾಗರಿಕರ ಹಾಗೂ ಸುತ್ತಲಿನ ಪ್ರದೇಶಗಳ ಜನರ ಜೀವನ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಮೇಲ್ಕಂಡ ಆದೇಶದ ಪ್ರಕಾರ ನಡೆದುಕೊಳ್ಳಬೇಕೆಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**